ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ : 91-080-22212408
ಫ್ಯಾಕ್ಸ್ : 91-080-22277528

ದಿನಾಂಕ: 11-03-2009

ಸಂಖ್ಯೆ: ತಾಂ.ಆಡಳಿತ.ಸುತ್ತೋಲೆ.15/2008-09

28 MAR 2009

## ಸುತ್ತೋಲೆ

ವಿಷಯ: ಮ್ಯುಟೇಷನ್ ಪೂರ್ವ ನಕ್ಷೆಗಳ ಅವಧಿಯನ್ನು ವಿಸ್ತರಿಸುವ ಬಗ್ಗೆ.

★★★

ಮ್ಯುಟೇಷನ್ ಪೂರ್ವ ನಕ್ಷೆಗಳನ್ನು ಸಾರ್ವಜನಿಕರಿಗೆ ಕೋರಿಕೆಯ ಮೇರೆಗೆ ವಿತರಿಸುವ ಕಾರ್ಯ ವ್ಯವಸ್ಥೆಯನ್ನು ಈಗಾಗಲೇ ಜಾರಿಗೊಳಿಸಲಾಗಿದೆ. ಮ್ಯುಟೇಷನ್ ಪೂರ್ವ ನಕ್ಷೆಗಳು ಆಸ್ತಿಗಳ ನೋಂದಣಿ ಸಮಯದಲ್ಲಿ ಮತ್ತು ಪಾಲು ವಿಂಗಡಣೆ ಸಮಯದಲ್ಲಿಯೂ ಸಹ ಜಾರಿಯಲ್ಲಿರುವ ನಿಯಮಾನುಸಾರ ಕಡ್ಡಾಯವಾಗಿರುತ್ತದೆ. ಸಾರ್ವಜನಿಕರಿಗೆ ಈ ನಕ್ಷೆಗಳನ್ನು ಒಂದು ತಿಂಗಳಲ್ಲಿ ವಿತರಿಸುವ ವ್ಯವಸ್ಥೆ ಜಾರಿಯಲ್ಲಿದೆ. ಈ ನಕ್ಷೆಗಳನ್ನು ಸಾರ್ವಜನಿಕರು ವಿತರಣೆಯಾದ 30 ದಿನಗಳ ಒಳಗಾಗಿ ಬಳಸಬೇಕಾಗಿರುತ್ತದೆ. ಹಾಗೂ ಕೋರಿಕೆಯ ಮೇರೆಗೆ ಈ ನಕ್ಷೆ ಕಾಲಾವಧಿಯನ್ನು ಇನ್ನೂ 30 ದಿನಗಳ ವರೆಗೆ ವಿಸ್ತರಿಸಬಹುದಾಗಿರುತ್ತದೆ.

ಹಲವು ಸಾರ್ವಜನಿಕರು ಈ ಕಾಲಾವಧಿಯನ್ನು ವಿಸ್ತರಿಸಲು ಮನವಿಗಳನ್ನು ಸಲ್ಲಿಸಿರುತ್ತಾರೆ. ಈ ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿ, ಹಲವು ಸಂದರ್ಭಗಳಲ್ಲಿ ನೋಂದಣಿ ವ್ಯವಹಾರಗಳು ಮತ್ತು ಪಾಲು ವಿಂಗಡಣೆ ವ್ಯವಹಾರಗಳು 30 ದಿನಗಳ ಕಾಲಾವಧಿಯನ್ನು ಮೀರುವುದು ಸಾಧ್ಯತೆಯಾಗಿರುತ್ತದೆ. ಸಾರ್ವಜನಿಕರ ಈ ಬೇಡಿಕೆಯನ್ನು ಒಪ್ಪಿ ಇಲಾಖೆಯು ಮ್ಯುಟೇಷನ್ ಪೂರ್ವ ನಕ್ಷೆಗಳ ಕಾಲಾವಧಿಯನ್ನು 60 ದಿನಗಳಿಗೆ ವಿಸ್ತರಿಸಿ ಕೂಡಲೇ ಜಾರಿಗೆ ಬರುವಂತೆ ಆದೇಶಿಸಿದೆ. ಮ್ಯುಟೇಷನ್ ಪೂರ್ವ ನಕ್ಷೆಗಳನ್ನು ವಿತರಿಸಿದ ನಂತರ 60 ದಿನಗಳ ಒಳಗಾಗಿ ಇವುಗಳನ್ನು ಇನ್ನು ಮುಂದೆ ಬಳಸಬಹುದಾಗಿರುತ್ತದೆ. ಕಾರಣಾಂತರದಿಂದ ಈ ಅವಧಿಯಲ್ಲಿ ಬಳಸಲು ಸಾಧ್ಯವಾಗದಿದ್ದಲ್ಲಿ ಕೋರಿಕೆಯ ಮೇರೆಗೆ ಇನ್ನೂ 30 ದಿನಗಳ ಅವಧಿಗೆ ವಿಸ್ತರಿಸಿ ಒಟ್ಟಾರೆ 90 ದಿನಗಳವರೆಗೆ ಬಳಸಲು ಅವಕಾಶ ನೀಡಲಾಗಿದೆ.

ಮ್ಯುಟೇಷನ್ ಪೂರ್ವ ನಕ್ಷೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಮತ್ತೊಂದು ಬೇಡಿಕೆ ಸ್ವೀಕೃತವಾಗಿದ್ದು, ಈ ನಕ್ಷೆಗಳನ್ನು ಮುಂದಿನ 6 ತಿಂಗಳಲ್ಲಿ ಬಳಸಲು ವ್ಯವಸ್ಥೆ ಕಲ್ಪಿಸಲು ಕೋರಿರುತ್ತಾರೆ. ಆಸ್ತಿಯನ್ನು ಕೊಳ್ಳುವವರು ಮತ್ತು ಮಾರುವವರು ಬದಲಾಗದೇ ಇದ್ದ ಸಂದರ್ಭದಲ್ಲಿ ಹಾಗೂ ಮ್ಯುಟೇಷನ್ ಪೂರ್ವ ನಕ್ಷೆ ಸಿದ್ಧಪಡಿಸಿ, ವಿತರಿಸಿದ ನಂತರ ಅದೇ ಸರ್ವೆ ನಂಬರಿನ ವಿಸ್ತೀರ್ಣಕ್ಕೆ ಮತ್ತಾವುದೇ ಮ್ಯುಟೇಷನ್ ಪೂರ್ವ ನಕ್ಷೆ ಬೇರೆಯ ವ್ಯಕ್ತಿಗಳಿಗೆ ವಿತರಣೆಯಾಗದೆ ಇದ್ದಲ್ಲಿ ದಾಖಲೆಗಳನ್ನು ಪರಿಶೀಲಿಸಿ ನಕ್ಷೆ ವಿತರಣೆಯಾದ 6 ತಿಂಗಳ ಅವಧಿಯೊಳಗಾಗಿ ರೂ.100-00 ಶುಲ್ಕ ಪಡೆದು ನವೀಕರಿಸಬಹುದಾಗಿದೆ. ಈ

sslrCircular on 11 E Sketch
G

ಹಿಂದೆ ನಕ್ಷೆ ಕೋರಿ ಅರ್ಜಿ ಸಲ್ಲಿಸಿದ್ದ ಮಾರುವವರು ಮತ್ತು ಕೊಳ್ಳುವವರೇ ಇದ್ದಲ್ಲಿ ಮಾತ್ರ ಈ ಅವಕಾಶ ಲಭ್ಯವಾಗಲಿದೆ. ಅರ್ಜಿ ಸಲ್ಲಿಸಿದ ೩ ದಿನಗಳ ಒಳಗಾಗಿ ನಕ್ಷೆಯನ್ನು ನವೀಕರಿಸಿ, ಸೂಕ್ತ ಷರಾ ದಾಖಲಿಸಿ ವಿತರಿಸುವುದು. ಅರ್ಜಿ ಸಲ್ಲಿಸಿದ ನಂತರ, ಹಿಂದೆ ಸಲ್ಲಿಸಿದ್ದ ವ್ಯಕ್ತಿಗಳೇ ಇದ್ದಾರೆಂಬುದನ್ನು ಖಚಿತ ಪಡಿಸಿಕೊಳ್ಳುವುದಲ್ಲದೆ, ಕಛೇರಿಯಲ್ಲಿ ಮ್ಯುಟೇಷನ್ ಪೂರ್ವ ನಕ್ಷೆ ವಿತರಿಸಲು ನಿರ್ವಹಿಸುವ ಎಲ್ಲಾ ವಹಿಗಳನ್ನು ಕಡ್ಡಾಯವಾಗಿ ಪರಿಶೀಲಿಸುವುದು. ಈ ವಹಿಗಳಲ್ಲಿ ನವೀಕರಣ ಕೋರುತ್ತಿರುವ ನಕ್ಷೆ ವಿತರಣೆ ಆದನಂತರ, ಅದೇ ನಕ್ಷೆಗೆ ಕೋರಿಕೆ ಸಲ್ಲಿಸುತ್ತಿರುವ ಅವಧಿಯ ನಡುವೆ ಸಂಬಂದಿಸಿದ ಸರ್ವೆ ನಂಬರಿನ ವಿಸ್ತೀರ್ಣಕ್ಕೆ ಮತ್ತೆ ಯಾವುದೇ ಮ್ಯುಟೇಷನ್ ಪೂರ್ವ ನಕ್ಷೆಗೆ ಅರ್ಜಿ ಸಲ್ಲಿಸಿಲ್ಲವೆಂಬುದನ್ನು ಹಾಗೂ ನಕ್ಷೆ ತಯಾರಿಸಿ ವಿತರಿಸಿರುವುದಿಲ್ಲವೆಂಬುದನ್ನು ಖಚಿತಪಡಿಸಕೊಳ್ಳಬೇಕಾಗಿರುತ್ತದೆ. ಒಂದು ವೇಳೆ ಈ ರೀತಿ ಬೇಡಿಕೆ ಸ್ವೀಕರಿಸಿದ್ದು, ಮತ್ತೊಂದು ನಕ್ಷೆ ವಿತರಣೆ ಆಗಿದ್ದಲ್ಲಿ ನವೀಕರಣಕ್ಕೆ ಅವಕಾಶವಿರುವುದಿಲ್ಲ. ಈ ಸಂಬಂಧ ಅಗತ್ಯ ಎಲ್ಲಾ ದಾಖಲೆಗಳನ್ನು ೩ ದಿನಗಳ ಒಳಗಾಗಿ ಪರಿಶೀಲಿಸಿ ವಿಳಂಬಕ್ಕೆ ಅವಕಾಶ ನೀಡದೆ ಕ್ರಮ ಜರುಗಿಸಲು ಸೂಚಿಸಿದೆ.

11/5/07

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಬೆಂಗಳೂರು.

**ಪ್ರತಿಯನ್ನು:**

1) ಎಲ್ಲಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳಿಗೆ ಮಾಹಿತಿಗಾಗಿ.
2) ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3) ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಎಲ್ಲಾ ತಹಶೀಲ್ದಾರ್‌ಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ಪ್ರಾಚಾರ್ಯರು, ಭೂಮಾಪನ ತರಬೇತಿ ಸಂಸ್ಥೆ, ಮೈಸೂರು / ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ.
6) ಈ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
8) ಕೇಂದ್ರ ಕಛೇರಿಯ ಎಲ್ಲಾ ಶಾಖೆಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
9) ಅಧ್ಯಕ್ಷರು, ಕರ್ನಾಟಕ ರಾಜ್ಯ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಕಾರ್ಯನಿರ್ವಾಹಕ ಸಂಘ, ಬೆಂಗಳೂರು.

6.4